ದಿ: **04-07-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ವಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ:**

1. ನಾನು ಈಗ ಒಕ್ಕಲುತನ ಮಾಡುತ್ತೇನೆ. ಅದಕ್ಕೂ ಪೂರ್ವದಲ್ಲಿ ನಾನು ಅರಕೇರಾ ಗ್ರಾಮದ ಉಪತಹಶೀಲ್ದಾರ ಆಗಿ ಕೆಲಸ ಮಾಡಿರುತ್ತೇನೆ. ನಾನು ನಿವೃತ್ತಿ ಹೊಂದಿ ಸುಮಾರು 7-8 ವರ್ಷಗಳಾಗಿರುತ್ತದೆ. ಈ ದಾವೆಯನ್ನು ಸುಮಿತ್ರಮ್ಮ ರವರು ಸಲ್ಲಿಸಿರುತ್ತಾರೆ. ಸುಮಿತ್ರಮ್ಮ ಇವರು ಲಕ್ಷ್ಮೀಬಾಯಿ ಇವರ ಮೇಲೆ ಸಲ್ಲಿಸಿರುತ್ತಾರೆ. ಪ್ರತಿವಾದಿ ಲಕ್ಷ್ಮೀಬಾಯಿ ನನ್ನ ಹೆಂಡತಿಯಾಗಬೇಕು. ಅವರ ಪರವಾಗಿ ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ. ಪ್ರತಿವಾದಿಗೆ ಅರಾಮ ಇರುವುದಿಲ್ಲ ಹಾಗಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಲಕ್ಷ್ಮೀಬಾಯಿ ರವರು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಅವರು ಅರಾಮ ಆಗಿದ್ದರು. ಪ್ರತಿವಾದಿಗೆ ಅರಾಮ ಇರುವುದಿಲ್ಲ ಎಂದು ತೋರಿಸಲು ವೈದ್ಯಕೀಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

2. ವಾದಿ ಪ್ರತಿವಾದಿಯ ಮೇಲೆ ಹೊಲ ಒತ್ತುವರಿ ಮಾಡಿದ್ದಾರೆ ಎಂದು ದಾವಾ ಸಲ್ಲಿಸಿರುತ್ತಾರೆ. ಒತ್ತುವರಿಯನ್ನು ಯಾರು ಮಾಡಿರುತ್ತಾರೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯ ಮೇಲೆ ದಾವೆ ಸಲ್ಲಿಸಿರುತ್ತಾರೆ ಆದರೆ ನಾವು ಒತ್ತುವರಿ ಮಾಡಿರುವುದಿಲ್ಲ ಎನ್ನುತ್ತಾರೆ. ವಾದಿ ಹೆಸರಿನಲ್ಲಿ ಜಮೀನು ಸರ್ವೆ ನಂಬರ್ 6, ವಿಸ್ತೀರ್ಣ 03 ಎಕರೆ 14 ಗುಂಟೆ ಪಹಣಿ ಪ್ರಕಾರ ಇರುತ್ತದೆ. ವಾದಿಯ ಹೊಲದ ಚಕ್ ಬಂದಿ ಪೂರ್ವ ದಿಕ್ಕಿಗೆ ಮೊದಲು ಹಂಪಮ್ಮ ಇವರ ಜಮೀನು ಇತ್ತು ಈಗ

ವೆಂಕಟೇಶ ಇವರ ಜಮೀನು ಇದೆ, ಪಶ್ಚಿಮ ದಿಕ್ಕಿಗೆ ಬಸಲಿಂಗಮ್ಮ ಇವರ ಹೊಲ ಇದೆ, ಉತ್ತರ ದಿಕ್ಕಿಗೆ ಪ್ರತಿವಾದಿಯ ಹೊಲ ಇರುತ್ತದೆ ಮತ್ತು ದಕ್ಷಿಣ ದಿಕ್ಕಿಗೆ ಸರ್ವೆ ನಂಬರ್ 5 ಗೌಡರ ಹೊಲ ಇರುತ್ತದೆ. ದಾವಾ ಜಮೀನಿಗೆ ವಾದಿಯೇ ಮಾಲೀಕಳು ಮತ್ತು ಕಬ್ಜಾದಾರಳು ಇರುತ್ತಾಳೆಂದರೆ ಸರಿ.

3. ಪ್ರತಿವಾದಿ ಜಮೀನು ಸರ್ವೆ ನಂಬರ್ 6 ರಲ್ಲಿ 03 ಎಕರೆ 14 ಗುಂಟೆ ನಂತರ 03 ಎರಕೆ 13 ಗುಂಟೆ ಅವರ ಜಮೀನನ್ನು ಖರೀದಿ ಮಾಡಿರುತ್ತಾರೆ. ಸರ್ವೆ ನಂಬರ್ 6 ರಲ್ಲಿ ಪ್ರತಿವಾದಿ ಖರೀದಿ ಮಾಡಿದ 03 ಎಕರೆ 14 ಗುಂಟೆ ಮತ್ತು 03 ಎರಕೆ 13 ಗುಂಟೆ ಜಮೀನುಗಳಿಗೆ ಅವರೆ ಮಾಲೀಕರು ಮತ್ತು ಕಬ್ಜಾದಾರರು ಆಗಿರುತ್ತಾರೆ ಮತ್ತು ಸರ್ವೆ ನಂಬರ್ 6 ರಲ್ಲಿ ದಾವಾ ಜಮೀನು 03 ಎಕರೆ 14 ಗುಂಟೆ ವಾದಿ ಮಾಲೀಕರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ಹಿಂದಿನ ಮಾಲೀಕರಿಂದ ಖರೀದಿ ಮಾಡಿದ 03 ಎಕರೆ 14 ಗುಂಟೆ ಮತ್ತು 03 ಎಕರೆ 13 ಗುಂಟೆ ಜಮೀನಿನ ಕಬ್ಜಾದಲ್ಲಿದ್ದಾರೆ.

4. ದಾವಾ ಜಮೀನು ಅಳತೆ ಮಾಡಬೇಕೆಂದು ವಾದಿ ಸರ್ವೆ ಕಚೇರಿಗೆ ಅರ್ಜಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ರವರು ನ್ಯಾಯಾಲಯುಕ್ಕೆ ಏನೇನು ದಾಖಲಾತಿಗಳನ್ನು ಸಲ್ಲಿಸಿದ್ದಾರೆಂದು ನನಗೆ ಗೊತ್ತಿದೆ. ನಿ ಡಿ -17 ರ ಪ್ರಕಾರ ಸರ್ವೆ ನೋಟಿಸ್ ಅರ್ಜಿ ದಿನಾಂಕ: 09-09-2022 ರಂದು ವಾದಿ ಸರ್ವೆ ಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿ ಡಿ 18 ರಂತೆ ಸರ್ವೆಯವರ ಹೇಳಿಕೆ ಪತ್ರದ ಪ್ರಕಾರ ರೇಖಲಮರಡಿ ಗ್ರಾಮದ ಜಮೀನು ಸರ್ವೆ ನಂಬರ್ 6/*/* ರಲ್ಲಿ ತತ್ಕಾಲ್ ಪೋಡಿಗೆ ಅರ್ಜಿ ಬಂದಂತೆ

ಅರ್ಜಿಯನ್ನು ಭೂಮಾಪಕರ ಕಚೇರಿಯಿಂದ ಸ್ವೀಕರಿಕಸಿ ಮುಂಚಿತವಾಗಿ ನೋಟಿಸ್ ನೋಡಿ ನಿಗದಿತ ದಿನಾಂಕದಂದು ಹೋದಾಗ, ಗ್ರಾಮದಲ್ಲಿ ಮತ್ತು ಜಮೀನಿನಲ್ಲಿ ಮಳೆ ಬಂದು ಅರ್ಜಿದಾರರು ಈಗ ಲಾಗುದಾರರು ಯಾರು ಇರುವುದಿಲ್ಲ ಎಂದು ಸದ್ಯಕ್ಕೆ ಯಾವುದೇ ಅಳತೆ ಕಾರ್ಯ ಬೇಡ ಎಂದು 15 ದಿನ ಕಾಲವಕಾಶ ಕೇಳಿಕರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅಳತೆಯುವರು ಯಾರು ಬಂದಿರುವುದಿಲ್ಲ ನಾವು ಆ ಸಮಯದಲ್ಲಿ ಇರಲಿಲ್ಲ ಎನ್ನುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ